ಗುಲ್ನೂರ್ ಅವಳ ಮುಂದಲೆ ಹಿಡಿದು ದೂಕಿದಳು. ಹಗ್ಗ ತಂದು ದರದರ ಎಳಕೊಂಡೋಗಿ ಕಂಬಕ್ಕೆ ಕಟ್ಟಿ ಹಾಕಿದಳು. ಇಡೀ ದಿನ ತಿನ್ನೋಕೆ ಕೊಡಲಿಲ್ಲ. ಮೊತಿಜಾನಳಿಗೆ ಏನೂ ಅನಿಸ್ತಾಯಿಲ್ಲ. ಕಣ್ಣಲ್ಲಿ ನೀರೂ ಇಲ್ಲ. ಎದೆ ಉರೀತಾಯಿಲ್ಲ. ಅವಳೊಳಗಿನ ಖಾಲಿತನ ಹೃದಯದೊಳಗೆ ಗಟ್ಟಿಯಾಗತೊಡಗಿತು. ಅವಳು ತಾನು ಗಟ್ಟಿ ಹೆಣ್ಣಾಗಬೇಕು ಅಂದುಕೊಂಡಳು.

ಸಂಜೆ ಗುಲ್ನೂರ್ ಅವಳನ್ನ ಹಗ್ಗದ ಸಮೇತ ನೀರಿನ ಗುಂಡಿ ಹತ್ತಿರ ಎಳಕೊಂಡೋಗಿ, 'ನಾನಿನ್ನು ನಿಂಗೆ ಅನ್ನ ಹಾಕಲ್ಲ, ತಿನ್ನು, ಹುಲ್ಲು ತಿನ್ನು' ಅಂದು ನೂಕಿದಳು. ಅಬೂಲ್ ಸೂಳೆಮನೆಗೋದ. ಮೊತಿಜಾನಳನ್ನು ಜಗಲಿಗೆ ಕರ್ಕೊಂಡು ಬಂದು ಒಂದು ತಟ್ಟೇಲಿ ಅನ್ನ ಹಾಕಿ ಕೊಟ್ಟಳು ಗುಲ್ನೂರ್. ಅವಳು ಶಾಂತವಾಗಿ, ನಿಶ್ಯಬ್ದವಾಗಿ ಊಟ ಮಾಡಿದಳು. ಆಮೇಲೆ ಅವಳ ರೂಮಿನ ಬಾಗಿಲು ಮುಚ್ಚಿಕೊಂಡಿತು. ಕಣ್ಣ ಮುಂದೆ ಕತ್ತಲೆಯಾವರಿಸಿಕೊಂಡಿತು. ಇಡೀ ರಾತ್ರಿ ಒಂಚೂರು ಕಣ್ಮುಚ್ಚೋಕೆ ಆಗಲಿಲ್ಲ. ಚಾಪೆ ಮೇಲೆ ಒದ್ದಾಡ್ತಾ ಒದ್ದಾಡ್ತಾ ನೆಲದ ಮೇಲೆ ಉರುಳಿದಳು. ಸಮಾಧಾನವಾಗಿ, ಶಾಂತವಾಗಿ ಇರಲು ಪ್ರಯತ್ನಿಸಿದಳು. ಆಗಲಿಲ್ಲ. ಈ ನಿಶ್ಯಬ್ದ ರಾತ್ರಿಯಲ್ಲಿ ಅವಳಿಗೆ ಒಂಟಿತನ ಕಾಡತೊಡಗಿತು, ಯಾರಾದ್ರೂ ಒಬ್ರು ಜೊತೆಗೆ ಬೇಕು ಅನಿಸಿತು. ತುಂಬಾ ಹತ್ತಿರವಾದವರು, ಯಾರ ಜೊತೆ ತಾನು ಮನಬಿಚ್ಚಿ ಮಾತನಾಡಬಹುದೋ ಅಂಥವರು ಬೇಕಾಗಿತ್ತು. ಈಗವಳಿಗೆ ಸಂತೋಷ ಬೇಕು, ಸುಖ ಬೇಕು. ಇನ್ನು ಈ ರೀತಿ ಹೊಡೆಸಿಕೊಳ್ಳುವ ಜೀವನ ಬೇಡ, ದೂರ ನೂಕಿಸಿಕೊಳ್ಳುವ ಬದುಕು ಬೇಡ. ಕುಡುಕ, ಜೂಜುಕೋರ, ಸೂಳೆಸಂಗ ಮಾಡೋ ಲಂಪಟ ಗಂಡನ ಬಗ್ಗೆ ಅವಳಿಗೆ ಯಾವ ಭಾವನೆಯೂ ಇಲ್ಲ. ಯಾರನ್ನು ಹಳ್ಳಿಗರೆಲ್ಲ ಗಟ್ಟಿ ಹೆಣ್ಣು ಅಂತ ಕರೀತಾರೋ ಅವಳಿಗೆ ಸವಾಲಾಗಿ ನಿಲ್ಲಬೇಕು, ಅಂಥ ಹೆಣ್ಣಾದ ಅತ್ತೆಯ ಜೊತೆ ಮೊತಿಜಾನಳ ಹೋರಾಟ.



ದಿನಗಳು ಉರುಳುತ್ತವೆ. ಅದುವೇ ದಿನದ ನಿಯಮ. ಮೊತಿಜಾನಳ ದಿನಗಳೂ ಉರುಳಿದವು. ಅಬೂಲ್ ಮನೆಗೆ ಬಂದ್ರೆ ಬಂದ, ಇಲ್ಲದಿದ್ರೆ ಇಲ್ಲ. ಅತ್ತೆ ವರದಕ್ಷಿಣೆ ವಿಚಾರವಾಗಿ ಬೈದರೆ ಮೊತಿಜಾನ್ ಸುಮ್ಮನೆ ಕೇಳಿಸ್ಕೊಳ್ತಾಳೆ. ಎಷ್ಟೋ ದಿನಗಳಾದವು ಅವಳು ತವರು ಮನೆಗೆ ಹೋಗದೆ. ಅಲ್ಲಿಂದಲೂ ಯಾರೂ ಬರಲಿಲ್ಲ. ಅವಳ ಅಣ್ಣ ಎರಡು ಸಲ ಬಂದಿದ್ದ. ಗುಲ್ನೂರ್ ಬಹಳ ಕೆಟ್ಟದಾಗಿ ಅವಮಾನ ಮಾಡಿ ಕಳಿಸಿದ್ದಳು. ಹೋದ